ಶ್ರೀ ಬಿ. ರಾಚಯ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

(ಅ) ಹೌದು

(ಆ) ನವೆಂಬರ್ ೧೯೮೫ರಲ್ಲಿ ಪ್ರಾರಂಭಿಸಲಾಯಿತು. ೧೯೮೮ರ ಮಾರ್ಚಿ ಅಂತ್ಯದವರೆಗೆ ೩೨.೫೬ ಲಕ್ಷ ರೂಪಾಯಿಗಳು ವೆಚ್ಚವಾಗಿವೆ.

(ಇ) ಬಂದಿದೆ.

(ಈ) ಕಟ್ಟಡದ ಸಿವಿಲ್ ಕೆಲಸ ಪೂರ್ಣಗೊಂಡಿದೆ. ವಿದ್ಯುದೀಕರಣ ಕೆಲಸವು ಪ್ರಗತಿಯಲ್ಲಿದೆ. ೫-೬ ತಿಂಗಳಲ್ಲಿ ಕೆಲಸ ಪೂರ್ಣಗೊಳ್ಳುವ ನಿರೀಕ್ಷೆ ಇದೆ.

ಶ್ರೀ ಎಂ. ಶಿವಣ್ಣ.—ಮಾನ್ಯ ಸಚಿವರು ಉತ್ತರದಲ್ಲಿ ೨೨ರಲ್ಲಿ ಈ ಆಸ್ಪತ್ರೆ ಕಟ್ಟಡ ಪ್ರಾರಂಭವಾಗಿ ೩೨.೫೬ ಲಕ್ಷ ರೂಪಾಯಿಗಳು ವೆಚ್ಚವಾಗಿದ್ದು, ಇದರ ಕೆಲಸ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಉತ್ತರ ಕೊಟ್ಟಿದ್ದಾರೆ. ಹಾಗೆ ವಿಳಂಬವಾಗಲು ಕಾರಣಗಳೇನು? ಕೊನೆಯ ಉತ್ತರದಲ್ಲಿ ಸಿವಿಲ್ ಕೆಲಸ ಪೂರ್ಣಗೊಂಡಿದ್ದು ವಿದ್ಯುತ್ ಕೆಲಸ ಮುಕ್ತಾಯವಾಗಿದೆ ಎಂದು ಹೇಳಿದ್ದಾರೆ. ಮತ್ತು ಇನ್ನು ೬ ತಿಂಗಳಲ್ಲಿ ಕೆಲಸ ಪೂರ್ಣ ಮಾಡಿಯಾವುದಾಗಿ ಹೇಳಿದ್ದಾರೆ. ನಾನು ಕಳೆದ ಮೂರು ವರ್ಷಗಳಿಂದ ಸದನದಲ್ಲಿ ಪ್ರಶ್ನೆ ಕೇಳಿದಾಗಲೆಲ್ಲಾ ಇನ್ನು ಒಂದು ತಿಂಗಳಲ್ಲಿ, ಎರಡು ತಿಂಗಳಲ್ಲಿ ಪೂರ್ಣಗೊಳ್ಳುವುದೆಂದು ಉತ್ತರ ಬಂದಿತ್ತು. ಹೀಗೆ ವಿಳಂಬವಾಗಲು ಕಾರಣಗಳೇನು? ಅಲ್ಲದೆ ವಿದ್ಯುದೀಕರಣವಾಗಿದ್ದರೂ ಕಳಪೆ ವೈರ್‌ಗಳನ್ನು ಉಪಯೋಗಿಸಲಾಗಿದೆ. ಕೆಲವು ಕಡೆ ಕಟ್ಟಡ ಬಿರುಕು ಬಿಡುತ್ತಿದೆ. ಇದು ಸರ್ಕಾರಕ್ಕೆ ತಿಳಿದಿದೆಯೇ?

ಶ್ರೀ ಬಿ. ರಾಚಯ್ಯ.—ನಾನು ಅಲ್ಲಿಗೆ ಹೋಗಿ ಪರಿಶೀಲನೆ ಮಾಡಿ ಬಂದಿದ್ದೇನೆ. ಕಂಟ್ರಾಕ್ಟರ್‌ಗೆ ಹಳೇ ಬಾಕಿ ಕೊಡಲಿಲ್ಲ ಎಂದು ಪೂರ್ಣಗೊಳಿಸುವ ಕೆಲಸ ನಿಲ್ಲಿಸಿದ್ದರೆಂದು ತಿಳಿದು ಬಂತು. ಈಗ ಜಿಲ್ಲಾ ಪರಿಷತ್‌ನವರು ಒಂದು ಲಕ್ಷ ರೂಪಾಯಿ ಕೊಡಲು ಮುಂದೆ ಬಂದಿರುವುದರಿಂದ ಇನ್ನಾರು ತಿಂಗಳಲ್ಲಿ ಇದನ್ನು ಮುಗಿಸಲಾಗುವುದು. ಇನ್ನು ಕಳಪೆ ವೈರ್‌ಗಳನ್ನು ಸರಿಪಡಿಸುವಂತೆ ಮಾಡಲು ಜಿಲ್ಲಾ ಪರಿಷತ್ ಚೀಫ್ ಸೆಕ್ರೆಟರಿಯವರಿಗೆ ತಿಳಿಸಿದ್ದೇನೆ.

ಶ್ರೀ ಎಂ. ಶಿವಣ್ಣ.—ಮಾನ್ಯ ಸಚಿವರಲ್ಲಿ ಪೂರ್ಣ ಮಾಹಿತಿ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ. ೨೨ರಲ್ಲಿ ಪ್ರಾರಂಭವಾದ ಕಟ್ಟಡದಲ್ಲಿ ಅನೇಕ ಕಡೆ ಬಿರುಕು ಬಂದಿದೆ, ಇದರಿಂದ ಕಟ್ಟಡ ಬೀಳುವ ಸಂಭವವಿರುವುದರಿಂದ ೩೭ ಲಕ್ಷ ರೂಪಾಯಿಗಳ ಈ ಕಟ್ಟಡವನ್ನು ಎಷ್ಟರಮಟ್ಟಿಗೆ ಕಟ್ಟಿದ್ದಾರೆ ಹಿಂದಿನ ಅಭಿಯಂತರರು ಎಂಬ ಬಗ್ಗೆ ಪೂರ್ಣ ತನಿಖೆ ಮಾಡಿಸುತ್ತಾರೆಯೇ ?

ಶ್ರೀ ಬಿ. ರಾಚಯ್ಯ.—ನಾನು ಹೋಗಿದ್ದಾಗ ಕೆಲವು ಕಡೆ ಹಾಸಿಗೆಯ ಕೆಳಗಡೆ ಪ್ಲೇಟ್‌ಗಳನ್ನು ಹಾಕುತ್ತಿದ್ದರು ಹಾಗೇ ವೈರ್‌ಗಳನ್ನೂ ಹಾಕುತ್ತಿದ್ದರು. ಈಗ ಜಿಲ್ಲಾ ಪರಿಷತ್ತಿನ ಚೀಫ್ ಸೆಕ್ರೆಟರಿಯವರಿಗೆ ಪರ್ಸನಲಾಗಿ ಹೋಗಿ ಕೆಲಸವನ್ನು ಪರೀಕ್ಷೆ ಮಾಡಲು ತಿಳಿಸುತ್ತೇನೆ.

ಶ್ರೀ ಎಂ. ಶಿವಣ್ಣ.—ಇದು ನಮ್ಮ ಹೆಚ್ಚಿನ ಕೋಟೆ ತಾಲ್ಲೂಕಿನಲ್ಲೇ ಒಂದು ಸುಸಜ್ಜಿತ ಆಸ್ಪತ್ರೆಯಾಗಬೇಕಾಗಿತ್ತು. ಆದರೆ ಅದು ಕುಸಿಯುವ ಹಂತಕ್ಕೆ ಈಗಲೇ ಬಂದಿದೆ. ಆದ್ದರಿಂದ ಅದರ ಬಗ್ಗೆ ತನಿಖೆ ಮಾಡಿಸಿ ರಿಪೋರ್ಟ್ ತೆಗೆದುಕೊಂಡು ಆಮೇಲೆ ಮುಂದಿನ ಕ್ರಮ ತೆಗೆದುಕೊಳ್ಳುವಿರಾ ?

ಶ್ರೀ ಬಿ. ರಾಚಯ್ಯ.—ಸದರಿ ಕಟ್ಟಡದ ಭದ್ರತೆ ಬಗ್ಗೆ ಚೀಫ್ ಇಂಜಿನಿಯರ್, ಜಿಲ್ಲಾ ಪರಿಷತ್‌ಗೆ ಪತ್ರ ಬರೆಯುತ್ತೇನೆ.

ಜಾಗೃತ ತನಿಖಾ ದಳವು ವ್ಯಾಪಾರಿಗಳ ಮನೆ ಪರಿಶೋಧಿಸಿರುವ ಬಗ್ಗೆ

೭೪೯ ೧೯೦೪ ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಚಿಕ್ಕಮಗಳೂರು ಜಿಲ್ಲೆಯ ಆಹಾರ ಇಲಾಖೆಯ ಜಾಗೃತ ತನಿಖಾ ದಳವು ಹಠಾತ್ ವ್ಯಾಪಾರಿಗಳ ಮನೆ ಪರಿಶೋಧಿಸಲು ಹೋಗಿ ವ್ಯಾಪಾರಿಗಳಿಗೆ ಇಲ್ಲದ ಕಿರುಕುಳ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಅ) ವ್ಯಾಪಾರಿಯ ಮನೆ ತಪಾಸಣೆ ಮಾಡುವ ಮೊದಲು ಜಿಲ್ಲಾಧಿಕಾರಿಯವರ ಗಮನಕ್ಕೆ ತಂದು ಜಿಲ್ಲಾಧಿಕಾರಿಯವರ ನಿಯೋಜಿಸುವವರ ಜೊತೆಗೆ ಹೋಗಿ ತಪಾಸಣೆ ಮಾಡಿದರೆ ಒಳ್ಳೆಯದಲ್ಲವೆ?

(ಇ) ಇದರಿಂದ ವ್ಯಾಪಾರಿ ಹಾಗೂ ಜಾಗೃತ ದಳದವರ ಮಧ್ಯೆ ನಡೆಯುವ ಅವ್ಯವಹಾರ ತಪ್ಪುವುದಿಲ್ಲವೇ .

(ಈ) ಇದರ ಬಗ್ಗೆ ಸರ್ಕಾರ ಪರಿಶೀಲಿಸುವುದೇ ?

ಶ್ರೀ ಬಸವರಾಜ ಪಾಟೀಲ್ ಅನ್ವರಿ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

(ಅ) ಇಲ್ಲ.

(ಆ) ರೈತರ ಅಗತ್ಯ ವಸ್ತುಗಳ ಕಾಯ್ದೆ ಅನ್ವಯ, ತನಿಖಾ ದಳವು ತನಿಖೆಗೆ ಮೊದಲು ಜಿಲ್ಲಾಧಿಕಾರಿಗಳವರಿಗೆ ತಿಳಿಸಬೇಕಾದ ಅಗತ್ಯತೆಯಿಲ್ಲ.

(ಇ) ಯಾವ ಅವ್ಯವಹಾರಗಳು ವ್ಯಾಪಾರಿಗಳ ಮತ್ತು ಜಾಗೃತ ದಳದವರ ನಡುವೆ ನಡೆದಿರುವುದಿಲ್ಲ.

(ಈ) ಉದ್ಭವಿಸುವುದಿಲ್ಲ.

ಶ್ರೀ ಐ. ಬಿ. ಶಂಕರ್.—ಮಾನ್ಯ ಸಚಿವರು ಶ್ರೀ ರಾಮನ ಕಾಲದಲ್ಲಿ ನಂಬಿಕೆಯಿಟ್ಟುಕೊಂಡು ಕೆಲಸ ಮಾಡುತ್ತಿರುವುದಕ್ಕೆ ಸಂತೋಷ. ನನ್ನ ಚಿಕ್ಕಮಗಳೂರಿನಲ್ಲಿ ತನಿಖಾ ದಳದವರು ಪ್ರಮುಖವಾಗಿ ೩-೪ ಅಂಗಡಿಗಳನ್ನು ಕ್ಷೇತ್ರ ತನಿಖೆ ಮಾಡುವುದೇ ಇಲ್ಲ. ಲೋಕಲ್ ಅಧಿಕಾರಿಗಳು ೪-೬ ಸಲ ರೈಡ್ ಮಾಡಿರುತ್ತಾರೆ. ಆಗ ಅವರಿಗೆ ಇವರು ಮಾಡುವ ವ್ಯವಹಾರ ಗೊತ್ತಾಗಬೇಕಿತ್ತದೆ. ಆದರೆ ಈ ತನಿಖಾ ದಳದವರಿಗೆ ಮಾತ್ರ ಏನೂ ಸಿಗುವುದಿಲ್ಲ. ತನಿಖಾ ದಳದವರು ಆ ಅಂಗಡಿಗಳನ್ನು ತಮ್ಮ ವ್ಯಾಪಾರ ಸ್ನೇಹವನ್ನಾಗಿ ಮಾಡಿಕೊಂಡು ವ್ಯಾಪಾರ ಪ್ರಾರಂಭ ಮಾಡಿದ್ದಾರೆ. ಜಿಲ್ಲಾಧಿಕಾರಿಗಳು ನೇಮಿಸುವವರನ್ನು ಜೊತೆಯಲ್ಲಿ ಅವರು ಕರೆದುಕೊಂಡು ಹೋದಾಗ ಸಣ್ಣಪುಟ್ಟ ಕೆರುಕುಳಗಳು ತಪ್ಪುತ್ತದೆ. ಜೊತೆಗೆ ಅವರು ಬಂದು ಮಾಹಿತಿಯನ್ನು ಕೊಟ್ಟಾಗ ಇದರಲ್ಲಿ ದೊಡ್ಡವರು, ಸಣ್ಣವರು ಎಲ್ಲರೂ ಸಿಕ್ಕಿ ಬೀಳುತ್ತಾರೆ. ಇದರಿಂದ ಸರಕಾರಕ್ಕೆ ಒಳ್ಳೆಯದಾಗುತ್ತದೆಂದು ನಾನು ಈ ಪ್ರಶ್ನೆಯನ್ನು ಕೇಳಿದ್ದು ಆದರೆ ಇದು ನಮ್ಮ ಗಮನಕ್ಕೆ ಬಾರದೇ ಇರಬಹುದು, ಅದನ್ನು ನಾನು ಒಪ್ಪುತ್ತೇನೆ. ಆದರೆ ನೀವು ಶಾಮೀಲು ಆಗಿಲ್ಲವೆಂದು ಹೇಳುವುದು ಸತ್ಯಕ್ಕೆ ದೂರವಾದ ಮಾತು. ೪-೬ ಜನ ನನ್ನನ್ನು ಕರೆದುಕೊಂಡು ಹೋಗಿ ತೋರಿಸಿದ್ದಾರೆ ನನ್ನ ಕಣ್ಣಿಗೆ ಕಂಡ ಸತ್ಯ ಇದು. ಅಲ್ಲಿ ಅವ್ಯವಹಾರ ನಡೆಯುತ್ತಿರುವುದು ನಿಜ, ತನಿಖಾ ದಳದವರು ವ್ಯಾಪಾರಿಗಳ ಜೊತೆಯಲ್ಲಿ ಶಾಮೀಲಾಗಿರುವುದು ಸತ್ಯ ಸಂಗತಿ. ಇದನ್ನು ತಡೆಹಿಡಿದರೆ ಸರಕಾರಕ್ಕೆ ಗೌರವ ಸಿಗುತ್ತದೆ ಎಂಬ ಉದ್ದೇಶದಿಂದ ನಾನು ಈ ಪ್ರಶ್ನೆಯನ್ನು ಹಾಕಿದ್ದೇನೆ. ಜಿಲ್ಲಾಧಿಕಾರಿಗಳೇ ಹೋಗಬೇಕೆಂದು ಇಲ್ಲ, ಜಿಲ್ಲಾಧಿಕಾರಿಗಳು ನೇಮಿಸುವ ಪ್ರತಿನಿಧಿಯನ್ನು ಇವರ ಜೊತೆಯಲ್ಲಿಟ್ಟುಕೊಂಡಾಗ ಅವರು ಏನು ವ್ಯವಹಾರ ಮಾಡುತ್ತಾರೆಂಬುದು ಕಣ್ಣಿಗೆ ಕಾಣುವುದಕ್ಕೆ ಅನುಕೂಲವಾಗುತ್ತದೆ. ಮಾನ್ಯ ಸಚಿವರು ಇದರ ಬಗ್ಗೆ ಹೆಚ್ಚಿನ ನಿಗಾ ವಹಿಸಿ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡರೆ ಸರ್ಕಾರಕ್ಕೆ ಇದರಿಂದ ಕೀರ್ತಿ ಬರುತ್ತದೆ. ಮಾನ್ಯ ಮಂತ್ರಿಗಳು ಇದರ ಬಗ್ಗೆ ಉತ್ತರ ಕೊಡಬೇಕು.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಮಾನ್ಯ ಶಾಸಕರು ಕೇಳಿದ ಹಾಗೆ ಅಲ್ಲಿ ನಡೆಯುತಕ್ಕಂತಹ ಅವ್ಯವಹಾರಗಳು ಜನರಿಗೆ ಕಾಣತಕ್ಕ ರೀತಿಯಲ್ಲಿ ನಡೆಯುವುದಿಲ್ಲ ಅದನ್ನು ನಾನೂ ಕೂಡ ಒಪ್ಪುತ್ತೇನೆ. ಅವರು ಕೊಟ್ಟಿರತಕ್ಕಂತಹ ಕೆಲವು ಮಾಹಿತಿಗಳ ಮೇಲೆ ಕೆಳ ವ್ಯಾಪಾರಿಗಳ ಮೇಲೆ ಖಂಡಿತವಾಗಿ ಕ್ರಮ ತೆಗೆದುಕೊಳ್ಳುತ್ತೇವೆ ಮತ್ತು ಆ ದಳದ ಬಗ್ಗೆ ಕೂಡ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಈ ಇಲಾಖೆ ಮೊದಲು ಗೃಹ ಖಾತೆಯ ವ್ಯಾಪ್ತಿಯಲ್ಲಿತ್ತು ಮೊನ್ನೆ ತಾನೆ ಮಂತ್ರಿ ಮಂಡಲದಲ್ಲಿ ಇದರ ಬಗ್ಗೆ ವಿಚಾರ ಮಾಡಿ ಇತ್ತೀಚೆಗೆ ಆಹಾರ ಇಲಾಖೆಯ ವ್ಯಾಪ್ತಿಯಲ್ಲಿ ಬರುವಂತೆ ಮಾಡಲಾಗಿದೆ. ಮಾನ್ಯ ಸದಸ್ಯರ ಸೂಚನೆಯನ್ನು ಮುಂಬೆ ನಮ್ಮ ಆಡಳಿತದಲ್ಲಿ ಅಳವಡಿಸಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿಸುತ್ತೇನೆ.